**ಸರ್ವೋಚ್ಚ ನ್ಯಾಯಾಲಯ**

**ಕ್ರಿಮಿನಲ್ ಅಪೀಲು ಸಂಖ್ಯೆ: 819/2009**

ಕರ್ನಾಟಕ ರಾಜ್ಯ (ಕರ್ನಾಟಕ ಲೋಕಾಯುಕ್ತ) –ವಿರುದ್ಧ– ಎಂ.ಆರ್. ಹಿರೇಮಠ್

**ತೀರ್ಪು**

**ನ್ಯಾಯಮೂರ್ತಿ ಡಾ॥ ಧನಂಜಯ ವೈ. ಚಂದ್ರಚೂಡ್:**

1. ಅನುಮತಿ ನೀಡಲಾಗಿದೆ.

2. ಈ ಅಪೀಲು ಕರ್ನಾಟಕ ಉಚ್ಚ ನ್ಯಾಯಾಲಯದ ಮಾನ್ಯ ಏಕ ನ್ಯಾಯಾಧೀಶರ ದಿನಾಂಕ: 27ನೇ ಏಪ್ರಿಲ್, 2017ರ ತೀರ್ಪಿನಿಂದ ಉದ್ಭವಿಸಿದ್ದು, ಅದರಿಂದ ದಂಡ ಪ್ರಕ್ರಿಯಾ ಸಂಹಿತೆ 1973 ರ 482ನೇ ಪ್ರಕರಣದಡಿ ಅರ್ಜಿಯನ್ನು ಅಂಗೀಕರಿಸಲಾಯಿತು. ಹಾಗೆ ಮಾಡುವಾಗ, ಉಚ್ಚ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆ 239ನೇ ಪ್ರಕರಣದಡಿ ಬಿಡುಗಡೆ ಮಾಡುವುದಕ್ಕಾಗಿನ ಎದುರುದಾರನ ಅರ್ಜಿಯನ್ನು ತಿರಸ್ಕರಿಸಿ, ಬೆಂಗಳೂರಿನ ವಿಶೇಷ ನ್ಯಾಯಾಧೀಶರ ದಿನಾಂಕ: 5ನೇ ಡಿಸೆಂಬರ್ 2016ರ ಆದೇಶವನ್ನು ರದ್ದುಪಡಿಸಿತು.

3. ಎದುರುದಾರನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂಸ್ವಾಧೀನ ವಿಭಾಗದಲ್ಲಿ ಉಪ–ಆಯುಕ್ತರಾಗಿ ಮುಖ್ಯ ಕಾಲಘಟ್ಟದಲ್ಲಿದ್ದನು. ಬೆಂ.ಅ.ಪ್ರಾ.ವು ಬೆಂಗಳೂರಿನ ಹೊರವಲಯಗಳಲ್ಲಿ ಲೇಔಟನ್ನು ರೂಪಿಸಲು ಕೆಲವು ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿತ್ತು. ದೂರುದಾರನು ಆ ಜಮೀನುಗಳ ಡೀನೋಟಿಫಿಕೇಶನ್‌ಗಾಗಿ ನ್ಯಾಯಾಲಯವನ್ನು ಕೋರಿದ್ದು, ಅದನ್ನನುಸರಿಸಿ ಒಂದು ನಿರ್ದೇಶನವು ಜಾರಿಗೊಂಡಿರುತ್ತದೆ. ತದನುಸಾರವಾಗಿ, ದೂರುದಾರನು ಜಮೀನುಗಳ ಡೀನೋಟಿಫಿಕೇಶನ್‌ಗಾಗಿ ಬೆಂ.ಅ.ಪ್ರಾ.ಕ್ಕೆ ಅರ್ಜಿಯನ್ನು ಸಲ್ಲಿಸಿದ್ದಾನೆ.

4. ಪ್ರಾಸಿಕ್ಯೂಷನ್‌ನ ವಾದವೆಂದರೆ, ದಿನಾಂಕ: 6ನೇ ನವೆಂಬರ್, 2012ರಂದು, ಡೀನೋಟಿಫಿಕೇಶನ್ ಸಮಿತಿಯ ಮುಂದೆ ಕಡತವನ್ನು ಮಂಡಿಸಬೇಕಿದ್ದ ಎದುರುದಾರನನ್ನು (ಆಪಾದಿತ ಸಂ.1) ಭೇಟಿಯಾಗಲು ದೂರುದಾರನು ಪ್ರಯತ್ನಿಸಿದ್ದಾನೆ. ದೂರುದಾರನು ಎದುರುದಾರನನ್ನು ಭೇಟಿಯಾಗಲು ಅನುಮತಿಸದಿದ್ದಾಗ್ಯೂ, ಅವನ ಡ್ರೈವರನ್ನು ಭೇಟಿಯಾಗಿ ಅವನಿಂದ ಅಂಥ ಪ್ರಕರಣಗಳು ಎರಡನೇ ಆಪಾದಿತನ' 'ಮಧ್ಯಸ್ಥಿಕೆ'ಯಲ್ಲಿ ನಡೆಯುತ್ತಿರುವ ಬಗ್ಗೆ, ಒಬ್ಬ ವಕೀಲನು ಎದುರುದಾರನ ಏಜೆಂಟಾಗಿ ವರ್ತಿಸುವನೆಂದು ತಾತ್ಪರ್ಯವಾಗುವ ಬಗ್ಗೆ ತಿಳಿದುಕೊಂಡಿದ್ದಾನೆಂದು ಆಪಾದಿಸಲಾಗಿದೆ. ಎರಡನೇ ಆಪಾದಿತನು ಲಂಚ ಕೇಳುವನೆಂದು ಶಂಕಿಸಿ, ದಿನಾಂಕ: 8ನೇ ನವೆಂಬರ್, 2012 ರಂದು ಲೋಕಾಯುಕ್ತ ಪೊಲೀಸರಲ್ಲಿ ದೂರು ದಾಖಲಾಯಿತು. ಪೊಲೀಸರು ಅನುಸರಿಸಬೇಕಾದ ಸೂಚನೆಗಳೊಂದಿಗೆ ರಹಸ್ಯ ಕ್ಯಾಮೆರಾ (ಸ್ಪೈ ಕ್ಯಾಮೆರಾ)ವನ್ನು ನೀಡಿದರು. ದೂರುದಾರನ ಪ್ರತಿನಿಧಿಯೊಂದಿಗೆ ಎರಡನೇ ಆಪಾದಿತನ ಭೇಟಿಯ ವ್ಯವಸ್ಥೆ ಮಾಡಲಾಯಿತು ಎಂದು ಆಪಾದಿಸಲಾಗಿದೆ. ದಿನಾಂಕ: 12 ಮತ್ತು 13ನೇ ನವೆಂಬರ್ 2012 ರಂದು ಭೇಟಿ ನಡೆದಿದ್ದು, ಹೇಳಲಾದ ಎರಡನೇ ಆಪಾದಿತನು ವ್ಯವಹಾರದ ಇತ್ಯರ್ಥಕ್ಕಾಗಿ ವಿಧಿಸಲಾಗುವ ಮೊತ್ತದ ಬಗ್ಗೆ ದೂರುದಾರನ ಪ್ರತಿನಿಧಿಗಳಿಗೆ ತಿಳಿಸಿದ್ದಾನೆಂದು ಆಪಾದಿಸಲಾಗಿದೆ. ದೂರುದಾರನು ದಿನಾಂಕ: 15ನೇ ನವೆಂಬರ್ 2012 ರಂದು ಬೆಂ.ಅ.ಪ್ರಾ.ದ ಕಛೇರಿಯ ಬಳಿ ರಾತ್ರಿ ಸುಮಾರು 7.30ಕ್ಕೆ ಎದುರುದಾರನನ್ನು ಭೇಟಿಯಾಗಿದ್ದಾನೆಂದು ಪ್ರಾಸಿಕ್ಯೂಷನ್ ಆಪಾದಿಸಿದೆ. ದೂರುದಾರ ಮತ್ತು ಎದುರುದಾರನ ನಡುವೆ ನಡೆದ ಸಂಭಾಷಣೆಯು ಅದನ್ನು ಆಪಾದಿಸಲಾಗಿರುವಂಥ ಅವಧಿಯಲ್ಲಿ ರಹಸ್ಯ ಕ್ಯಾಮೆರಾದಲ್ಲಿ ದಾಖಲಾಗಿದ್ದು, ಅದರಲ್ಲಿ ಕೆಲಸ ಪೂರ್ಣಗೊಂಡಿದ್ದಕ್ಕಾಗಿ ಹಣ ವಿನಿಮಯಕ್ಕೆ ಸಂಬಂಧಿಸಿದ ಯಾವುದೋ ಚರ್ಚೆಯಾಗಿತ್ತು.

5. ದಿನಾಂಕ: 16ನೇ ನವೆಂಬರ್ 2012 ರಂದು, ಲೋಕಾಯುಕ್ತರ ಮುಂದೆ ದೂರನ್ನು ದಾಖಲಿಸಲಾಯಿತು ಮತ್ತು ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸಲಾಯಿತು. ತರುವಾಯ,

ಬಲೆಯನ್ನು ಬೀಸಲಾಯಿತು ಮತ್ತು ಆಪಾದಿಸಲಾದ ಲಂಚದ ಪ್ರಾರಂಭಿಕ ಪಾವತಿಗಾಗಿ ಎದುರುದಾರನ ಪರವಾಗಿ ಐದು ಲಕ್ಷ ರೂಪಾಯಿಗಳ ಮೊತ್ತವನ್ನು ಸ್ವೀಕರಿಸುವಾಗ ಎರಡನೇ ಆಪಾದಿತನನ್ನು ದಸ್ತಗಿರಿ ಮಾಡಲಾಯಿತು.

6. ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988ರ 13(2)ನೇ ಪ್ರಕರಣದೊಂದಿಗೆ ಓದಲಾದ 7, 8, 13(1)(ಡಿ) ಪ್ರಕರಣಗಳಡಿ ದಂಡನೀಯವಾದ ಅಪರಾಧಗಳಿಗಾಗಿ ಆರೋಪಗಳನ್ನು ರೂಪಿಸಲಾಯಿತು.

7. ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸುವುದಕ್ಕಾಗಿ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿ ಅನುಕ್ರಮವಾಗಿ ಬರುವ ಮೂರು ಅರ್ಜಿಗಳನ್ನು ಎದುರುದಾರನು ಸಲ್ಲಿಸಿದ್ದಾನೆ. ವ್ಯವಹರಣೆಗಳಿಂದ ಬಿಡುಗಡೆ ಪಡೆಯುವುದನ್ನು ಕೋರಲು, ಎದುರುದಾರನಿಗೆ ತನ್ನ ಪರಿಹಾರಗಳನ್ನು ಅನುಸರಣೆ ಮಾಡಲು ಅವಕಾಶವನ್ನು ನೀಡಿ, ದಿನಾಂಕ: 26ನೇ ಫೆಬ್ರವರಿ 2013 ರಂದು ಹಿಂತೆಗೆದುಕೊಳ್ಳಲಾದಂತೆ ಮೊದಲ ಎರಡು ಅರ್ಜಿಗಳನ್ನು ವಜಾಗೊಳಿಸಲಾಯಿತು. ಮೂರನೇ ಅರ್ಜಿಯನ್ನು ಉಚ್ಚ ನ್ಯಾಯಾಲಯವು ವಜಾಗೊಳಿಸಿತು.

8. ಆ ನಂತರ ಮೊದಲನೇ ಎದುರುದಾರನು ಬೆಂಗಳೂರಿನ ವಿಶೇಷ ನ್ಯಾಯಾಧೀಶರ ಮುಂದೆ ಮುಂದೆ ದಂಡ ಪ್ರಕ್ರಿಯಾ ಸಂಹಿತೆಯ 239ನೇ ಪ್ರಕರಣದಡಿ, ಬಿಡುಗಡೆಯ ಅರ್ಜಿಯನ್ನು ಸಲ್ಲಿಸಿದ್ದಾನೆ. ಅಧಿವಿಚಾರಣಾ ನ್ಯಾಯಾಲಯವು ದಿನಾಂಕ: 5ನೇ ಡಿಸೆಂಬರ್, 2016ರ ಆದೇಶದ ಮೂಲಕ ಅರ್ಜಿಯನ್ನು ವಜಾಗೊಳಿಸಿತು. ಈ ಆದೇಶವನ್ನು ಉಚ್ಚ ನ್ಯಾಯಾಲಯದ ಮುಂದೆ ಪುನರವಲೋಕನದಲ್ಲಿ ಪ್ರಶ್ನಿಸಲಾಯಿತು. ಸಮರ್ಥನೀಯತೆಯ ಕಾರಣದ ಮೇಲೆ ಪುನರವಲೋಕನವನ್ನು ತಿರಸ್ಕರಿಸಲಾಯಿತು.

ಎದುರುದಾರರು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿ ಅರ್ಜಿಯನ್ನು ಹಾಕಿದ್ದು, ಅದು ಮಾನ್ಯ ಏಕಪೀಠ ನ್ಯಾಯಾಧೀಶರ ದಿನಾಂಕ: 27ನೇ ಏಪ್ರಿಲ್ 2017ರ ಪ್ರಶ್ನಿತ ಆದೇಶಕ್ಕೆ ಕಾರಣವಾಯಿತು.

9. ಮಾನ್ಯ ಏಕಪೀಠ ನ್ಯಾಯಾಧೀಶರು ಎದುರುದಾರನ ವಿರುದ್ಧದ ವ್ಯವಹರಣೆಗಳನ್ನು ಈ ಮುಂದಿನ ಕಾರಣಗಳ ಆಧಾರದ ಮೇಲೆ ರದ್ದುಪಡಿಸಿದ್ದಾರೆ: (i) ಸಾಕ್ಷ್ಯ ಅಧಿನಿಯಮದ 65ಬಿ ಪ್ರಕರಣದಡಿ ಪ್ರಮಾಣಪತ್ರ ಇಲ್ಲದಿದ್ದಾಗ, ರಹಸ್ಯ ಕ್ಯಾಮೆರಾದ ಆಧಾರದ ಮೇಲೆ ಮಾಡಲಾದ ವಿದ್ಯುನ್ಮಾನ ದಾಖಲೆಯ ಅನಂತರದ ಸಾಕ್ಷ್ಯವು ಸಾಕ್ಷ್ಯವಾಗಿ ಅಂಗೀಕಾರಾರ್ಹವಲ್ಲ; (ii) "ಈ ಕಾಲಾವಧಿಯಲ್ಲಿ" ಎಂಬುದು ಅನಂತರದ ಆಲೋಚನೆಯಾಗುವುದರಿಂದ, ಅದಕ್ಕೆ ಯಾವುದೇ ದೃಢೀಕರಣ ಒದಗಿಸುವುದಕ್ಕೆ ಪ್ರಾಸಿಕ್ಯೂಷನ್‌ಗೆ ಅವಕಾಶ ಕೊಟ್ಟಿಲ್ಲ; ಮತ್ತು (iii) ವಿದ್ಯುನ್ಮಾನ ಸಾಕ್ಷ್ಯವನ್ನು ಹೊರತುಪಡಿಸಿ, ಇತರ ಸಾಕ್ಷ್ಯ ಲಭ್ಯವಿದೆ ಎಂಬ ಪ್ರಾಸಿಕ್ಯೂಷನ್‌ನ ವಾದವು ಮೇಲ್ನೋಟಕ್ಕೆ ಒಪ್ಪಲಾಗದ್ದಾಗಿದೆ. ಮಾನ್ಯ ನ್ಯಾಯಾಧೀಶರು ಆ ನಂತರ ಸಿಕ್ಕಿ ಹಾಕಿಸುವ ವ್ಯವಹರಣೆಗಳಿಗೆ ಗುರಿಯಾದ ವ್ಯಕ್ತಿಯಾದ ಎರಡನೇ ಆಪಾದಿತನು ಈ ಘಟನೆಯಲ್ಲಿ ಅವನನ್ನು ಸಾಧನವಾಗಿ ಬಳಸಲಾದ ಕಾರಣ ಎದುರುದಾರನ ಹೆಸರನ್ನು ಹೇಳಿರುವುದು ಕಂಡುಬಂದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಈ ನಿರ್ಣಯದ ಮೇಲೆ ಈ ವ್ಯವಹರಣೆಗಳನ್ನು ರದ್ದುಪಡಿಸಲಾಗಿರುತ್ತದೆ.

10. ಉಚ್ಚ ನ್ಯಾಯಾಲಯದ ತೀರ್ಪಿನ ಸರಿತನವನ್ನು ಖಂಡಿಸಿ, ಅಪೀಲುದಾರನ ಪರ ಹಾಜರಾದ ಮಾನ್ಯ ವಕೀಲರಾದ **ಶ್ರೀ ಜೋಸೆಫ್ ಅರಿಸ್ಟಾಟಲ್ ಎಸ್**. ರವರು, (i) 65ಬಿ ಪ್ರಕರಣದ ಮೇರೆಗಿನ ಪ್ರಮಾಣಪತ್ರವನ್ನು ಈ ಹಂತದಲ್ಲಿ ಅಧಿಕೃತಗೊಳಿಸಲಾಯಿತೆಂದು ತೀರ್ಮಾನಿಸುವಲ್ಲಿ ಉಚ್ಚ ನ್ಯಾಯಾಲಯವು ಸ್ಪಷ್ಟವಾಗಿ ಲೋಪವೆಸಗಿದೆ; (ii) ಅಧಿವಿಚಾರಣೆಯಲ್ಲಿ ಸಾಕ್ಷ್ಯದ ಕ್ರಮದಲ್ಲಿ ವಿದ್ಯುನ್ಮಾನ

ಸಾಕ್ಷ್ಯವನ್ನು ಹಾಜರುಪಡಿಸಿದಾಗ ಆ ಹಂತದಲ್ಲಿ 65ಬಿ ಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ಹಾಜರುಪಡಿಸಬೇಕೆಂದು ಅಗತ್ಯಪಡಿಸಲಾಗುತ್ತದೆ ಮತ್ತು ಹೀಗಾಗಿ ಉಚ್ಚ ನ್ಯಾಯಾಲಯವು ಉಪಬಂಧವನ್ನು ಅನ್ವಯಿಸಲು ಕೋರಲಾದಂಥ ಹಂತವು ಅವಧಿಪೂರ್ವದ್ದಾಗಿದೆ; (iii) ರಹಸ್ಯ ಕ್ಯಾಮೆರಾಗೆ ಸಂಬಂಧಿಸಿದ ವಿದ್ಯುನ್ಮಾನ ಸಾಕ್ಷ್ಯವನ್ನು ಹೊರತುಪಡಿಸಿ, ಮೊದಲನೇ ಮತ್ತು ಎರಡನೇ ಆಪಾದಿತರು ಭಾಗಿಯಾಗಿರುವುದನ್ನು ಮೇಲ್ನೋಟಕ್ಕೆ ತೋರಿಸುವಂಥ ಇತರ ಸಾಕ್ಷ್ಯಾಧಾರಗಳ ಮೇಲೆ ಪ್ರಾಸಿಕ್ಯೂಷನ್ ಅವಲಂಬಿಸಿದೆ; (iv) ಆ ಸಾಕ್ಷ್ಯದ ಸ್ವರೂಪವನ್ನು ಪರಿಗಣಿಸದೆ, ಅದು ಮನದಟ್ಟಾಗುವಂತೆ ಕಂಡುಬಂದಿಲ್ಲ ಎಂಬ ನೀರಸ ಸಮರ್ಥನೆಯ ಆಧಾರದ ಮೇಲೆ ಅಂಥ ಸಾಕ್ಷಾಧಾರಗಳ ಮೇಲೆ ಅವಲಂಬಿಸುವುದರಿಂದ ಪ್ರಾಸಿಕ್ಯೂಷನ್ನನ್ನು ಉಚ್ಚ ನ್ಯಾಯಾಲಯವು ತಡೆದಿದೆ; (v) ದೂರುದಾರನಿಗೆ ರಹಸ್ಯ ಕ್ಯಾಮೆರಾವನ್ನು ನೀಡುವಲ್ಲಿ ಮತ್ತು ಆ ಪ್ರಕ್ರಿಯೆಯನ್ನನುಸರಿಸಿ ದಿನಾಂಕ: 15ನೇ ನವೆಂಬರ್ 2012 ರಂದು ಎದುರುದಾರನೊಂದಿಗೆ ನಡೆದ ಭೇಟಿಯಲ್ಲಿ ಏನು ನಡೆಯಿತೋ ಅದನ್ನು ದಾಖಲಿಸುವಲ್ಲಿ ತನಿಖಾಧಿಕಾರಿಯು **ಲಲಿತಾ ಕುಮಾರಿ –ವಿರುದ್ಧ– ಉತ್ತರ ಪ್ರದೇಶ ಸರ್ಕಾರ** ಪ್ರಕರಣದಲ್ಲಿ ಈ ನ್ಯಾಯಾಲಯದ ನಿರ್ಣಯದ ಮೂಲಕ ಯೋಜಿಸಲಾದಂಥ ಸ್ವರೂಪದ ಪ್ರಾರಂಭಿಕ ವಿಚಾರಣೆಯನ್ನು ಮಾತ್ರ ನಡೆಸಿರುತ್ತಾರೆ, ಹಾಗೂ (vi) ಪ್ರಾರಂಭಿಕ ವಿಚಾರಣೆಯ ಉದ್ದೇಶವು, ಸಂಜ್ಞೇಯ ಅಪರಾಧವನ್ನು ಮಾಡಲಾಗಿತ್ತೆ? ಎಂಬುದನ್ನು ಖಚಿತಪಡಿಸಲು ಪ್ರಾಸಿಕ್ಯೂಷನ್‌ಗೆ ಸಾಧ್ಯಗೊಳಿಸುವುದು ಮಾತ್ರ ಆಗಿತ್ತು. ಅದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರಾರಂಭಿಕ ವಿಚಾರಣೆ ನಡೆಯುವ ಅವಧಿಯನ್ನು ರಹಸ್ಯ ಕ್ಯಾಮೆರಾದ ಬಳಕೆಯು, **ಲಲಿತಾ ಕುಮಾರಿ** ಪ್ರಕರಣದ ತೀರ್ಪಿನಲ್ಲಿ ಆಯ್ಕೆ ಮಾಡಿಕೊಂಡಿರುವ ಅಸಾಧಾರಣ ವಿಷಯಗಳಲ್ಲಿ ಬರುವ ಪ್ರಿ–ಟ್ರ್ಯಾಪ್ (ಮೊದಲೇ ಯೋಜಿಸಿ ಸಿಕ್ಕಿಹಾಕಿಸುವ) ಮಹಜರ್‌ನ ಸ್ವರೂಪದಲ್ಲಿತ್ತು ಎಂದು ನಿವೇದಿಸಿದ್ದಾರೆ. ದಂಡ ಪ್ರಕ್ರಿಯಾ ಸಂಹಿತೆಯ 154ನೇ ಪ್ರಕರಣದಲ್ಲಿ ಒಳಗೊಂಡಿರುವ

ಉಪಬಂಧಗಳನ್ನು ಯುಕ್ತವಾಗಿ ಗಮನದಲ್ಲಿಟ್ಟುಕೊಂಡು, ಆ ನಂತರ ಮಾತ್ರವೇ ತನಿಖೆಯನ್ನು ಪ್ರಾರಂಭಿಸಲಾಗುವುದು ಎಂಬುದನ್ನು ಒತ್ತಿ ಹೇಳಲಾಗಿದೆ.

11. ಮತ್ತೊಂದು ಕಡೆಯಲ್ಲಿ, ಉಚ್ಚ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರ ಅಭಿಪ್ರಾಯವನ್ನು ಬೆಂಬಲಿಸುತ್ತಾ, ಎದುರುದಾರರ ಪರ ಹಾಜರಾದ ಮಾನ್ಯ ಹಿರಿಯ ವಕೀಲರಾದ ಶ್ರೀ ಬಸವಪ್ರಭು ಪಾಟೀಲ್‌ರವರು (i) ಸದ್ಯದ ಪ್ರಕರಣದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 154ನೇ ಪ್ರಕರಣದಡಿ ಮೊದಲ ಮಾಹಿತಿ ವರದಿಯನ್ನು ದಾಖಲಿಸುವ ಮುಂಚೆ ತನಿಖೆ ಪ್ರಾರಂಭವಾಗಿತ್ತೆಂದು ನಿವೇದಿಸಿದ್ದಾರೆ. ಮೊದಲ ಮಾಹಿತಿ ವರದಿಗೆ ಮುಂಚೆ 16ನೇ ದಿನಾಂಕ: ನವೆಂಬರ್, 2012 ಕ್ಕೆ ಮುಂಚೆ ನಡೆದಿರುವ ಘಟನೆಗಳನ್ನು ದಾಖಲಿಸಲಾಗಿತ್ತು ಮತ್ತು ಸಾಕ್ಷ್ಯಾಧಾರಗಳ ಸಂಗ್ರಹಣೆಯು ಸಾಕ್ಷ್ಯವಾಗಿ ಅಂಗೀಕಾರಾರ್ಹವಾಗುವುದಿಲ್ಲ; (ii) **ಲಲಿತಾ ಕುಮಾರಿ** ಪ್ರಕರಣದಲ್ಲಿ ಸಂವಿಧಾನ ಪೀಠದ ತೀರ್ಮಾನವು, ನಿರ್ದಿಷ್ಟವಾಗಿ ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮದಡಿ ಭ್ರಷ್ಟಾಚಾರವನ್ನು ಒಳಗೊಂಡ ಪ್ರಕರಣದಲ್ಲಿ ಪ್ರಾರಂಭಿಕ ವಿಚಾರಣೆಯನ್ನು ಅಂಗೀಕರಿಸುವಾಗ, ಅಧಿವಿಚಾರಣಾ ನ್ಯಾಯಾಲಯವು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವ ಮುಂಚೆಯೇ ಸಾಕ್ಷ್ಯವನ್ನು ಸಂಗ್ರಹಿಸಲು ತನಿಖಾಧಿಕಾರಿಯು ಹಕ್ಕುಳ್ಳವನಾಗಿದ್ದಾನೆಂದು ಈ ನ್ಯಾಯಾಲಯದ ತೀರ್ಮಾನದಿಂದ ಊಹಿಸುವಲ್ಲಿ ಲೋಪವೆಸಗಿದೆ; (iii) ತೋರಿಸಲು ಏನೂ ಇಲ್ಲದಿದ್ದು, ಠಾಣೆಯ ದಿನಚರಿ ಪುಸ್ತಕದಲ್ಲಿ ಅದನ್ನು ನಮೂದಿಸಿಯೂ ಇಲ್ಲ; (iv) ತತ್ಪರಿಣಾಮವಾಗಿ, ಅಧಿವಿಚಾರಣಾ ನ್ಯಾಯಾಲಯದ ತೀರ್ಮಾನವು **ಲಲಿತಾ ಕುಮಾರಿ** ಪ್ರಕರಣದಲ್ಲಿ ಸ್ಪಷ್ಟವಾಗಿ ನಿರೂಪಿಸಿದ ನಿಯಮಕ್ಕೆ ಅಸಮರ್ಪಕವಾಗಿದ್ದು, ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿ ಉಚ್ಚ ನ್ಯಾಯಾಲಯವು ತನ್ನ ಅಧಿಕಾರವ್ಯಾಪ್ತಿಯನ್ನು ಚಲಾಯಿಸಿ, ಮಧ್ಯಪ್ರವೇಶ ಮಾಡುವುದನ್ನು ಅದು ಸಮರ್ಥಿಸಿದೆ; (v) ವಾಸ್ತವವಾಗಿ, ಎರಡನೇ ಆಪಾದಿತನ ವಿರುದ್ಧ ಅಧಿವಿಚಾರಣೆ

ಮುಂದುವರೆದಿದೆ ಮತ್ತು ಏಳು ವರ್ಷಗಳು ಕಳೆದಿದ್ದರೂ ಸಾಕ್ಷ್ಯ ಅಧಿನಿಯಮದ 65ಬಿ ಪ್ರಕರಣದಡಿ ಪ್ರಮಾಣಪತ್ರದ ಪತಿಯನ್ನು ಹಾಜರುಪಡಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ; ಹಾಗೂ (vi) 65ಬಿ ಪ್ರಕರಣದಡಿ ಪ್ರಮಾಣಪತ್ರ ಇಲ್ಲದಿದ್ದು, ಸಾಕ್ಷ್ಯಾಧಾರವೂ ಇಲ್ಲವಾಗಿದೆ. ಹೀಗಾಗಿ ದಂಡ ಪ್ರಕ್ರಿಯಾ ಸಂಹಿತೆಯ 231ನೇ ಪ್ರಕರಣದಡಿ ಬಿಡುಗಡೆಯನ್ನು ಸಮರ್ಥಿಸಲಾಗಿದೆ.

12. ಈ ನಿವೇದನೆಗಳು ಪರಿಗಣನೆಗೆ ಬರುತ್ತವೆ.

13. ಯಾವ ಮೂಲಭೂತ ಆಧಾರದ ಮೇಲೆ ಉಚ್ಚ ನ್ಯಾಯಾಲಯವು ವ್ಯವಹರಣೆಗಳನ್ನು ರದ್ದುಪಡಿಸಲು ಮುಂದಾಗಿತ್ತೋ ಆ ಆಧಾರವು, ವಿದ್ಯುನ್ಮಾನ ದಾಖಲೆಯ ಅನಂತರದ ಸಾಕ್ಷ್ಯವನ್ನು ಮಂಡಿಸಲು ಈ ಹಂತದಲ್ಲಿ ಯಾವ ಪ್ರಮಾಣಪತ್ರ ಇಲ್ಲದ್ದರಿಂದ ಪ್ರಾಸಿಕ್ಯೂಷನ್‌ನ ಪ್ರಕರಣವು ವಿಫಲವಾಗಲು ತಕ್ಕುದಾಗಿದೆಯೋ ಅಂಥ ಪ್ರಮಾಣಪತ್ರದ ಹಾಜರುಪಡಿಸುವಿಕೆಯನ್ನು 65ಬಿ ಪ್ರಕರಣವು ಕಡ್ಡಾಯಗೊಳಿಸುತ್ತದೆ ಎಂಬ ಅದರ ಕಲ್ಪಿತ ಆಧಾರವಾಗಿದೆ. 65ಬಿ ಪ್ರಕರಣವನ್ನು ಈ ಮುಂದಿನಂತೆ ಓದಲಾಗುತ್ತದೆ:

**"ಪ್ರಕರಣ *65ಬಿ. ವಿದ್ಯುನ್ಮಾನ ದಾಖಲೆಗಳ ಅಂಗೀಕಾರಾರ್ಹತೆ.–***

*(1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗಿಯೂ, ಕಾಗದದ ಮೇಲೆ ಮುದ್ರಿತವಾದ, ಗಣಕ ಯಂತ್ರದಿಂದ ಉತ್ಪಾದಿಸಲಾದ, ದೃಷ್ಟಿಗೋಚರ ಅಥವಾ ಅಯಸ್ಕಾಂತೀಯ ಮಾಧ್ಯಮದಲ್ಲಿ ಸಂಗ್ರಹಿಸಲಾದ, ದಾಖಲಿಸಲಾದ ಅಥವಾ ಪ್ರತಿ ಮಾಡಲಾದ ವಿದ್ಯುನ್ಮಾನ ದಾಖಲೆಯನ್ನು ಒಳಗೊಂಡಿರುವ ಯಾವುದೇ ಮಾಹಿತಿಯನ್ನು ಸಹ (ಇದರಲ್ಲಿ ಇನ್ನು ಮುಂದೆ ಗಣಕಯಂತ್ರ ಉತ್ಪನ್ನ ಎಂದು ಉಲ್ಲೇಖಿಸಲಾಗಿದೆ) ಈ ಪ್ರಕರಣದಲ್ಲಿ ನಮೂದಿಸಲಾದ ಷರತ್ತುಗಳು ಮಾಹಿತಿಗೆ ಮತ್ತು ಸಂಬಂಧಪಟ್ಟ ಗಣಕಯಂತ್ರಕ್ಕೆ ಸಂಬಂಧಿಸಿದಂತೆ ತೃಪ್ತಿಕರವಾಗಿದ್ದರೆ, ದಸ್ತಾವೇಜು ಎಂದು*

ಭಾವಿಸತಕ್ಕದ್ದು ಮತ್ತು ಅಂಗೀಕಾರಾರ್ಹವಾಗಿರುವ ನೇರ ಸಾಕ್ಷ್ಯವಿದ್ದು ಮೂಲ ಪ್ರತಿಯಲ್ಲಿರುವ ಯಾವುದೇ ಒಳಾಂಶವನ್ನು ಅಥವಾ ಅದರಲ್ಲಿ ಹೇಳಲಾದ ಯಾವುದೇ ಸಂಗತಿಯು ಸಾಕ್ಷ್ಯವೆಂದು, ಯಾವುದೇ ಹೆಚ್ಚಿನ ರುಜುವಾತು ಇಲ್ಲದೆ ಮತ್ತು ಮೂಲ ಪ್ರತಿಯನ್ನು ಹಾಜರುಪಡಿಸದೆಯೇ, ಯಾವುದೇ ವ್ಯವಹರಣೆಯಲ್ಲಿ ಅಂಗೀಕಾರಾರ್ಹವಾಗತಕ್ಕದ್ದು.

(2) ಗಣಕಯಂತ್ರದ ಉತ್ಪನ್ನಕ್ಕೆ ಸಂಬಂಧಿಸಿದಂತೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಷರತ್ತುಗಳು ಈ ಮುಂದಿನಂತೆ ಇರತಕ್ಕದ್ದು, ಎಂದರೆ:-

(ಎ) ಗಣಕಯಂತ್ರದ ಬಳಕೆಯ ಮೇಲೆ ಕಾನೂನುಬದ್ಧ ನಿಯಂತ್ರಣ ಹೊಂದಿರುವ ವ್ಯಕ್ತಿಯು ಆ ಅವಧಿಯೊಳಗೆ ನಿಯತವಾಗಿ ನಿರ್ವಹಿಸಿದ ಯಾವುದೇ ಚಟುವಟಿಕೆಗಳ ಉದ್ದೇಶಗಳಿಗಾಗಿ ಮಾಹಿತಿಯನ್ನು ಸಂಗ್ರಹಿಸಲು ಅಥವಾ ಸಂಸ್ಕರಿಸಲು ಗಣಕಯಂತ್ರವನ್ನು ನಿಯತವಾಗಿ ಬಳಸಿದ ಅವಧಿಯಲ್ಲಿ ಗಣಕಯಂತ್ರ ಉತ್ಪಾದಿಸಿದ ಮಾಹಿತಿಯನ್ನು ಒಳಗೊಂಡ ಗಣಕಯಂತ್ರ ಉತ್ಪನ್ನ;

(ಬಿ) ಸದರಿ ಅವಧಿಯಲ್ಲಿ ವಿದ್ಯುನ್ಮಾನ ದಾಖಲೆಯಲ್ಲಿ ಒಳಗೊಂಡ ಮಾಹಿತಿಯ ಪ್ರಕಾರವು ಅಥವಾ ಹಾಗೆ ಒಳಗೊಂಡ ಮಾಹಿತಿ ಪ್ರಕಾರವನ್ನು ಸದರಿ ಚಟುವಟಿಕೆಗಳ ಸಾಮಾನ್ಯ ಕ್ರಮದಲ್ಲಿ ಪಡೆಯಲಾಗಿದ್ದು, ಅದನ್ನು ಗಣಕಯಂತ್ರದೊಳಕ್ಕೆ ನಿಯಮಿತವಾಗಿ ಸೇರಿಸುವುದು;

(ಸಿ) ಸದರಿ ಅವಧಿಯ ಪ್ರಮುಖ ಭಾಗದುದ್ದಕ್ಕೂ ಗಣಕಯಂತ್ರವು ಸಮರ್ಪಕ ಕಾರ್ಯ ನಿರ್ವಹಿಸಿದ್ದರೆ ಅಥವಾ ನಿರ್ವಹಿಸಿರದಿದ್ದರೆ, ಸರಿಯಾಗಿ ಕಾರ್ಯನಿರ್ವಹಿಸಿರದ ಅವಧಿಯಲ್ಲಿ ಅಥವಾ ಕಾರ್ಯನಿರ್ವಹಿಸದೆ ಇದ್ದಂಥ ಯಾವುದೇ ಅವಧಿಯಲ್ಲಿ ವಿದ್ಯುನ್ಮಾನ ದಾಖಲೆಗಳಿಗೆ ಅಥವಾ ಅದರ ಒಳಾಂಶಗಳ ಖಚಿತತೆ ಯಾವುದೇ ರೀತಿಯ ಪರಿಣಾಮ ಉಂಟಾಗದಿರುವುದು;

*(ಡಿ) ವಿದ್ಯುನ್ಮಾನ ದಾಖಲೆಯು ಒಳಗೊಂಡಿರುವ ಮಾಹಿತಿಯು ಸದರಿ ಚಟುವಟಿಕೆಗಳ ಸಾಮಾನ್ಯ ಕ್ರಮದಲ್ಲಿ ಗಣಕಯಂತ್ರದಲ್ಲಿ ಸೇರಿಸಿರುವ ಅಂಥ ಮಾಹಿತಿಯಿಂದ ಪುನರುತ್ಪತ್ತಿಯಾದುದು ಅಥವಾ ಪಡೆದಿರುವುದು.*

*(3) (2)ನೇ ಉಪ ಪ್ರಕರಣದ (ಎ) ಖಂಡದಲ್ಲಿ ನಮೂದಿಸಿರುವಂತೆ ಆ ಅವಧಿಯಲ್ಲಿ ನಿಯಮಿತವಾಗಿ ನಿರ್ವಹಿಸಿದ ಯಾವುದೇ ಕಾರ್ಯ ಚಟುವಟಿಕೆಗಳ ಉದ್ದೇಶಗಳಿಗಾಗಿ ಮಾಹಿತಿಯನ್ನು ಸಂಗ್ರಹಿಸುವ ಅಥವಾ ಸಂಸ್ಕರಿಸುವ ಕಾರ್ಯವನ್ನು ಯಾವುದೇ ಅವಧಿಯಲ್ಲಿ ಗಣಕಯಂತ್ರಗಳಿಂದ ನಿಯತವಾಗಿ ಅಂದರೆ,–*

*(ಎ) ಆ ಅವಧಿಯಲ್ಲಿ ಕಾರ್ಯನಿರ್ವಹಿಸುವ ಗಣಕಯಂತ್ರಗಳ ಸಂಯೋಜನೆಯಿಂದ; ಅಥವಾ*

*(ಬಿ) ಆ ಅವಧಿಪೂರ್ತಿ ಅನುಕ್ರಮವಾಗಿ ಕಾರ್ಯನಿರ್ವಹಿಸುವ ವಿವಿಧ ಗಣಕಯಂತ್ರಗಳಿಂದ; ಅಥವಾ*

*(ಸಿ) ಆ ಅವಧಿಯಲ್ಲಿ ಅನುಕ್ರಮವಾಗಿ ಕಾರ್ಯನಿರ್ವಹಿಸುವ ಗಣಕಯಂತ್ರಗಳ ವಿವಿಧ ಸಂಯೋಜನೆಗಳಿಂದ; ಅಥವಾ*

*(ಡಿ) ಆ ಅವಧಿಪೂರ್ತಿ ಯಾವುದೇ ಕ್ರಮದಲ್ಲಿ ಒಂದು ಅಥವಾ ಹೆಚ್ಚು ಗಣಕ ಯಂತ್ರಗಳು ಅಥವಾ ಗಣಕಯಂತ್ರಗಳ ಒಂದು ಅಥವಾ ಹೆಚ್ಚಿನ ಸಂಯೋಜನೆಗಳ ಅನುಕ್ರಮ ಕಾರ್ಯಾಚರಣೆ ಒಳಗೊಳ್ಳುವ ಯಾವುದೇ ಇತರ ರೀತಿಗಳಿಂದ*

*– ನಿರ್ವಹಿಸಿರುವಲ್ಲಿ ಆ ಅವಧಿಯಲ್ಲಿ ಆ ಉದ್ದೇಶಕ್ಕಾಗಿ ಬಳಸಲಾದ ಎಲ್ಲ ಗಣಕಯಂತ್ರಗಳನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ಒಂದೇ ಗಣಕಯಂತ್ರವೆಂದು ಪರಿಗಣಿಸತಕ್ಕದ್ದು ಮತ್ತು ಈ ಪ್ರಕರಣದಲ್ಲಿ ಗಣಕಯಂತ್ರಕ್ಕೆ ಮಾಡಲಾದ ಉಲ್ಲೇಖಗಳನ್ನು ಅದಕ್ಕನುಗುಣವಾಗಿ ಅರ್ಥೈಸತಕ್ಕದ್ದು.*

*(4) ಯಾವುವೇ ವ್ಯವಹರಣೆಗಳಲ್ಲಿ ಈ ಪ್ರಕರಣದ ಬಲದಿಂದಾಗಿ ಸಾಕ್ಷ್ಯದಲ್ಲಿ ಹೇಳಿಕೆಯನ್ನು ನೀಡಲು ಅಪೇಕ್ಷಿಸಿದಾಗ ಈ ಮುಂದಿನ ಯಾವುವೇ ವಿಷಯಗಳ ಬಗ್ಗೆ, ಎಂದರೆ:-*

*(ಎ) ಹೇಳಿಕೆಯನ್ನೊಳಗೊಂಡ ವಿದ್ಯುನ್ಮಾನ ದಾಖಲೆಯನ್ನು ಗುರುತಿಸುವ ಮತ್ತು ಅದನ್ನು ಯಾವ ರೀತಿಯಲ್ಲಿ ಉತ್ಪಾದಿಸಲಾಯಿತೆಂದು ವಿವರಿಸುವ;*

*(ಬಿ) ವಿದ್ಯುನ್ಮಾನ ದಾಖಲೆಯನ್ನು ಗಣಕಯಂತ್ರದಿಂದ ಉತ್ಪಾದಿಸಲಾಯಿತೆಂದು ತೋರಿಸುವ ಉದ್ದೇಶಕ್ಕಾಗಿ ಯುಕ್ತವೆನಿಸಬಹುದಾದಂತೆ ಆ ವಿದ್ಯುನ್ಮಾನ ದಾಖಲೆಯ ತಯಾರಿಕೆಯಲ್ಲಿ ಒಳಗೊಂಡ ಯಾವುದೇ ಸಾಧನದ ಅಂಥ ವಿವರಗಳನ್ನು ನೀಡುವ;*

*(ಸಿ) (2)ನೇ ಉಪಪ್ರಕರಣದಲ್ಲಿ ನಮೂದಿಸಿದ ಷರತ್ತುಗಳಿಗೆ ಸಂಬಂಧಿಸುವ ಯಾವುವೇ ವಿಷಯಗಳ ಬಗ್ಗೆ ವ್ಯವಹರಿಸುವ*

*- ಒಂದು ಪ್ರಮಾಣಪತ್ರ ಮತ್ತು ಸಂಬಂಧಪಟ್ಟ ಸಾಧನದ ಕಾರ್ಯಾಚರಣೆಗೆ ಅಥವಾ ಸಂಬಂಧಪಟ್ಟ ಕಾರ್ಯಚಟುವಟಿಕೆಗಳ ವ್ಯವಸ್ಥಾಪನೆಗೆ (ಯಾವುದು ಸಮುಚಿತವೋ ಅದು) ಸಂಬಂಧಿಸಿದಂತೆ ಜವಾಬ್ದಾರಿಯುತ ಅಧಿಕೃತ ಹುದ್ದೆಯನ್ನು ಹೊಂದಿರುವ ಒಬ್ಬ ವ್ಯಕ್ತಿಯು ಸಹಿ ಮಾಡಿರುವನೆಂದು ತಾತ್ಪರ್ಯವಾಗುವ ಪ್ರಮಾಣಪತ್ರವು, ಆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಯಾವುದೇ ವಿಷಯದ ಸಾಕ್ಷ್ಯವಾಗಿರತಕ್ಕದ್ದು ಮತ್ತು ಈ ಉಪಪ್ರಕರಣದ ಉದ್ದೇಶಗಳಿಗಾಗಿ ಅದನ್ನು ತಿಳಿಸುವ ವ್ಯಕ್ತಿಯು ತಿಳಿದಿರುವಷ್ಟು ಮತ್ತು ನಂಬುವಷ್ಟರಮಟ್ಟಿಗೆ ತಿಳಿಸುವ ವಿಷಯಕ್ಕಾಗಿ ಸಾಕಷ್ಟಾಗಿರತಕ್ಕದ್ದು.*

*(5) ಈ ಪ್ರಕರಣದ ಉದ್ದೇಶಗಳಿಗಾಗಿ,-*

*(ಎ) ಒಂದು ಗಣಕಯಂತ್ರಕ್ಕೆ ಒದಗಿಸುವ ಮಾಹಿತಿಯನ್ನು, ಅದಕ್ಕೆ ಸೂಕ್ತ ವಿಧಾನದಲ್ಲಿ ಒದಗಿಸಿದ್ದರೆ ಮತ್ತು ಹಾಗೆ ನೇರವಾಗಿ ಒದಗಿಸಿದ್ದರೆ ಅಥವಾ (ಮನುಷ್ಯನ ಮಧ್ಯಪ್ರವೇಶದಿಂದ ಅಥವಾ ಮಧ್ಯಪ್ರವೇಶವಿಲ್ಲದೆ) ಯಾವುದೇ ಸೂಕ್ತ ಸಲಕರಣೆಯಿಂದ ಒದಗಿಸಿದ್ದರೆ ಆ ಮಾಹಿತಿಯನ್ನು ಒದಗಿಸಲಾಗಿದೆಯೆಂದು ಭಾವಿಸತಕ್ಕದ್ದು.*

*(ಬಿ) ಯಾವನೇ ನೌಕರನು ನಿರ್ವಹಿಸಿದ ಕಾರ್ಯಚಟುವಟಿಕೆಗಳ ಕ್ರಮ ಆ ಕಾರ್ಯಚಟುವಟಿಕೆಗಳ ಕ್ರಮದಲ್ಲಿ ಹೊರತು ಅನ್ಯಥಾ ಗಣಕಯಂತ್ರದ ಚಾಲನೆಯಿಂದ ಆ ಚಟುವಟಿಕೆಗಳ ಉದ್ದೇಶಗಳಿಗಾಗಿ ಸಂಗ್ರಹಿಸಲಾಗುತ್ತಿರುವ ಅಥವಾ ಸಂಸ್ಕರಿಸಲಾಗುತ್ತಿರುವ ದೃಷ್ಟಿಯಿಂದ ಮಾಹಿತಿ ಒದಗಿಸಿರುವುದನ್ನು ಯುಕ್ತ ರೀತಿಯಲ್ಲಿ ಆ ಗಣಕಯಂತ್ರಕ್ಕೆ ಒದಗಿಸಿದ್ದರೆ ಆ ಕಾರ್ಯಚಟುವಟಿಕೆಗಳ ಕ್ರಮದಲ್ಲಿ ಆ ಮಾಹಿತಿಯನ್ನು ಅದಕ್ಕೆ ಒದಗಿಸಲಾಗಿದೆಯೆಂದು ಭಾವಿಸತಕ್ಕದ್ದು.*

*(ಸಿ) ಗಣಕಯಂತ್ರ ಉತ್ಪನ್ನವನ್ನು, ಗಣಕಯಂತ್ರವನ್ನು ನೇರವಾಗಿಯಾಗಲಿ ಅಥವಾ (ಮನುಷ್ಯನ ಮಧ್ಯಪ್ರವೇಶದಿಂದ ಅಥವಾ ಮಧ್ಯಪ್ರವೇಶವಿಲ್ಲದೆ) ಯಾವುದೇ ಸೂಕ್ತ ಸಲಕರಣೆಯ ಮೂಲಕವಾಗಿಯಾಗಲಿ ಪಡೆದಿರುವಾಗ ಅದನ್ನು ಗಣಕಯಂತ್ರದಿಂದ ಉತ್ಪಾದಿಸಲಾಗಿದೆಯೆಂದು ಭಾವಿಸತಕ್ಕದ್ದು.*

***ವಿವರಣೆ.–*** *ಈ ಪ್ರಕರಣದ ಉದ್ದೇಶಗಳಿಗಾಗಿ, ಇತರ ಮಾಹಿತಿಯಿಂದ ಪಡೆಯಲಾಗುತ್ತಿರುವ ಮಾಹಿತಿಗೆ ಮಾಡಲಾದ ಯಾವುದೇ ಉಲ್ಲೇಖವು ಅದರಿಂದ ಲೆಕ್ಕಾಚಾರ, ಹೋಲಿಕೆ ಅಥವಾ ಯಾವುದೇ ಇತರ ಪ್ರಕ್ರಿಯೆಯ ಮೂಲಕ ಪಡೆಯಲಾಗುತ್ತಿರುವುದಕ್ಕೆ ಮಾಡಿದ ಉಲ್ಲೇಖವಾಗಿರತಕ್ಕದ್ದು.*

14. 65ಬಿ ಪ್ರಕರಣದ ಉಪಬಂಧಗಳನ್ನು **ಅನ್ವರ್ ಪಿ.ವಿ. –ವಿರುದ್ಧ– ಪಿ.ಕೆ. ಬಷೀರ್** ಪ್ರಕರಣದಲ್ಲಿ ಈ ನ್ಯಾಯಾಲಯದ ಮೂವರು ನ್ಯಾಯಾಧೀಶರ ಪೀಠದ ಮುಂದೆ ಅರ್ಥವಿವರಣೆಗಾಗಿ ತರಲಾಯಿತು. ಉಪಬಂಧವನ್ನು ಅರ್ಥೈಸಿ, ಈ ನ್ಯಾಯಾಲಯವು ಈ ಮುಂದಿನಂತೆ ತೀರ್ಮಾನಿಸಿದೆ:

> "59 ಮತ್ತು 65–ಎ ಪ್ರಕರಣಗಳ ದೃಷ್ಟಿಯಿಂದ, ಸಾಕ್ಷ್ಯ ಅಧಿನಿಯಮದಡಿ ವಿದ್ಯುನ್ಮಾನ ದಾಖಲೆಯ ಮುಖಾಂತರ ಯಾವುದೇ ಸಾಕ್ಷ್ಯಚಿತ್ರದ ಸಾಕ್ಷ್ಯವನ್ನು 65–ಬಿ ಪ್ರಕರಣದಡಿ ನಿಗದಿಪಡಿಸಲಾದ ಕಾರ್ಯವಿಧಾನದ ಅನುಸಾರ ಮಾತ್ರವೇ ಸಾಬೀತುಪಡಿಸಬಹುದು.65–ಬಿ ಪ್ರಕರಣವು ವಿದ್ಯುನ್ಮಾನ ದಾಖಲೆಯ ಅಂಗೀಕಾರಾರ್ಹತೆಯೊಂದಿಗೆ ವ್ಯವಹರಿಸುತ್ತದೆ. ಈ

ಉಪಬಂಧಗಳ ಉದ್ದೇಶವು ಕಂಪ್ಯೂಟರ್‌ನಿಂದ ಸೃಜಿಸಲಾದ ವಿದ್ಯುನ್ಮಾನ ರೂಪದಲ್ಲಿ ಅನಂತರದ ಸಾಕ್ಷ್ಯವನ್ನು ಪಾವಿತ್ರ್ಯಗೊಳಿಸುವುದಾಗಿದೆ."

**"ಈ ಪ್ರಕರಣದ ಕಾರಣದಿಂದಾಗಿ ಸಾಕ್ಷ್ಯದಲ್ಲಿ ಹೇಳಿಕೆಯನ್ನು ನೀಡಲು ಇಚ್ಛಿಸಿದಲ್ಲಿ"** ಯಾವುದೇ ವ್ಯವಹರಣೆಗಳಲ್ಲಿ 65ಬಿ(4)ನೇ ಪ್ರಕರಣವನ್ನು ಅನ್ವಯಿಸಲಾಗಿದೆ. (4)ನೇ ಉಪ–ಪ್ರಕರಣದ ಈ ಭಾಗವನ್ನು ಒತ್ತಿಹೇಳುತ್ತಾ, ವಿದ್ಯುನ್ಮಾನ ದಾಖಲೆಯನ್ನು ಸಾಕ್ಷ್ಯವಾಗಿ ಬಳಸಲು ಕೋರಿದಾಗ, ಪ್ರಮಾಣಪತ್ರವನ್ನು ಹಾಜರುಪಡಿಸುವ ಅಗತ್ಯತೆ ಉದ್ಭವಿಸುತ್ತದೆ ಎಂದು **ಅನ್ವರ್** ಪ್ರಕರಣದಲ್ಲಿ ತೀರ್ಮಾನಿಸಲಾಗಿದೆ. ತೀರ್ಪಿನ ಈ ಮುಂದಿನ ಉದ್ಧೃತ ಭಾಗದಲ್ಲಿ ಇದು ಸ್ಪಷ್ಟವಾಗಿದೆ:

> **"ಅತಿ ಮುಖ್ಯವಾಗಿ, ಹೇಳಿಕೆಯನ್ನು ಸಾಕ್ಷ್ಯವಾಗಿ ಹಾಜರುಪಡಿಸಿದಾಗ ಅದನ್ನು ಸಾಕ್ಷ್ಯವಾಗಿ ನೀಡಲು ಕೋರಿರುವುದಕ್ಕೆ ಸಂಬಂಧಿಸಿದಂತೆ,** ಕಂಪ್ಯೂಟರ್ ಪ್ರಿಂಟೌಟ್, ಕಾಂಪ್ಯಾಕ್ಟ್ ಡಿಸ್ಕ್ (ಸಿಡಿ), ವಿಡಿಯೋ ಕಾಂಪ್ಯಾಕ್ಟ್ ಡಿಸ್ಕ್ (ವಿಸಿಡಿ), ಪೆನ್‌ಡ್ರೈವ್, ಇತ್ಯಾದಿಯಂತಹ **ವಿದ್ಯುನ್ಮಾನ ದಾಖಲೆಯ ಜೊತೆಗೆ ಅಂಥ ಪ್ರಮಾಣಪತ್ರ ಒಳಗೊಂಡಿರಬೇಕು**. ಸಾಕ್ಷ್ಯವಾಗಿ ಬಳಸಲು ಕೋರಲಾದ ವಿದ್ಯುನ್ಮಾನ ದಾಖಲೆಗೆ ಸಂಬಂಧಿಸಿದ ಎರಡು ಪ್ರಮಾಣ ಚಿಹ್ನೆಗಳಾದ (ಹಾಲ್‌ಮಾರ್ಕ್ಸ್) ಮೂಲ ಮತ್ತು ಖಚಿತತೆಗಳನ್ನು ದೃಢಪಡಿಸಲು ಈ ಎಲ್ಲಾ ಸುರಕ್ಷಾ ವಿಧಗಳನ್ನು ಕೈಗೊಳ್ಳಲಾಗಿದೆ. ಅಂಥ ಸುರಕ್ಷಾ ವಿಧಗಳು ಇಲ್ಲದಿದ್ದರೆ ವಿದ್ಯುನ್ಮಾನ ದಾಖಲೆಗಳು ಅಕ್ರಮವಾಗಿ ತಿದ್ದಲು, ಮಾರ್ಪಾಡು ಮಾಡಲು, ಸ್ಥಾನ ಬದಲಾವಣೆ ಮಾಡಲು, ಕತ್ತರಿಸಿ ಹಾಕಲು ಮುಂತಾದವುಗಳಿಗೆ ಹೆಚ್ಚಿನ ಸಂಭಾವ್ಯವಿದ್ದು, ವಿದ್ಯುನ್ಮಾನ ದಾಖಲೆಗಳ ಸಾಕ್ಷಿಯ ಆಧಾರದ ಮೇಲೆ ಇಡೀ ಅಧಿವಿಚಾರಣೆಯು ನ್ಯಾಯದ ವಿಡಂಬನೆಗೆ ಕಾರಣವಾಗಬಲ್ಲದು." (ಒತ್ತು ನೀಡಲಾಗಿದೆ)

15. ಇದೇ ಅಭಿಪ್ರಾಯವನ್ನು **ಯೂನಿಯನ್ ಆಫ್ ಇಂಡಿಯಾ –ವಿರುದ್ಧ– ಸಿಡಿಆರ್ ರವೀಂದ್ರ ವಿ. ದೇಸಾಯಿ** ಪ್ರಕರಣದಲ್ಲಿ ಈ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರ ಪೀಠದಿಂದ ಪುನರುಚ್ಚರಿಸಲಾಗಿದೆ. ಮುಂಚಿನ ಸಂದರ್ಭದಲ್ಲಿ 65ಬಿ ಪ್ರಕರಣದಡಿ ಪ್ರಮಾಣಪತ್ರವನ್ನು ಹಾಜರುಪಡಿಸದಿರುವುದು ಸರಿಪಡಿಸಬಲ್ಲ

ನ್ಯೂನತೆಯೆಂದು ನ್ಯಾಯಾಲಯವು ಒತ್ತಿ ಹೇಳಿದೆ. ನ್ಯಾಯಾಲಯವು **ಸೋನು ಅಲಿಯಾಸ್ ಅಮರ್ – ವಿರುದ್ಧ– ಹರಿಯಾಣ ರಾಜ್ಯ** ಪ್ರಕರಣದಲ್ಲಿ ಹಿಂದಿನ ನಿರ್ಣಯದ ಮೇಲೆ ಅವಲಂಬಿಸಿದ್ದು, ಅದರಲ್ಲಿ ಈ ಮುಂದಿನಂತೆ ತೀರ್ಮಾನಿಸಲಾಗಿದೆ:

> "ನ್ಯಾಯಾಲಯದಿಂದ ದೃಢಪಡಿಸಲಾದಂತೆ ಸಂದಿಗ್ಧವಾದ ಪರೀಕ್ಷೆಯೆಂದರೆ, **ದಸ್ತಾವೇಜನ್ನು ಗುರುತು ಮಾಡುವ ಹಂತದಲ್ಲಿ ನ್ಯೂನತೆಯನ್ನು ಸರಿಪಡಿಸಲಾಗಿದೆಯೇ? ಎಂಬುದಾಗಿದೆ. ಈ ಪರೀಕ್ಷೆಯನ್ನು ಸದ್ಯದ ಪ್ರಕರಣಕ್ಕೆ ಅನ್ವಯಿಸಿ, ಪ್ರಮಾಣಪತ್ರವಿಲ್ಲದೆ ಗುರುತು ಮಾಡಲಾಗಿರುವ ಬಗ್ಗೆ ಸಿಡಿಆರ್‌ಗಳಿಗೆ ಆಕ್ಷೇಪಣೆಯನ್ನು ನೀಡಿದ್ದಲ್ಲಿ, ಆ ಕೊರತೆಯನ್ನು ಸರಿಪಡಿಸುವ ಅವಕಾಶವನ್ನು ನ್ಯಾಯಾಲಯವು ಪ್ರಾಸಿಕ್ಯೂಷನ್‌ಗೆ ನೀಡಿರಬಹುದಾಗಿತ್ತು.**"
>
> (ಒತ್ತು ನೀಡಲಾಗಿದೆ)

16. ಕಾನೂನಿನ ಮೇಲ್ಕಂಡ ನಿಯಮವನ್ನು ಗಮನದಲ್ಲಿಟ್ಟುಕೊಂಡು, ಆರೋಪ ಪಟ್ಟಿಯನ್ನು ಸಲ್ಲಿಸಿದಾಗಿನ ಆ ಹಂತದಲ್ಲಿ ಸಾಕ್ಷ್ಯ ಅಧಿನಿಯಮದ 65ಬಿ(4)ನೇ ಪ್ರಕರಣದಡಿ ಪ್ರಮಾಣಪತ್ರವನ್ನು ಹಾಜರುಪಡಿಸಲು ವಿಫಲವಾದದ್ದು ಪ್ರಾಸಿಕ್ಯೂಷನ್‌ಗೆ ಮಾರಕವಾಯಿತು ಎಂಬ ನಿರ್ಣಯಕ್ಕೆ ಬರುವಲ್ಲಿ ಉಚ್ಚ ನ್ಯಾಯಾಲಯವು ತಪ್ಪುಮಾಡಿದೆ. ಅಧಿವಿಚಾರಣೆಯಲ್ಲಿ ವಿದ್ಯುನ್ಮಾನ ದಾಖಲೆಯನ್ನು ಸಾಕ್ಷ್ಯವಾಗಿ ಹಾಜರುಪಡಿಸಲು ಕೋರಿದಾಗ ಅಂಥ ಪ್ರಮಾಣಪತ್ರವನ್ನು ಹಾಜರುಪಡಿಸುವ ಅಗತ್ಯತೆ ಉದ್ಭವಿಸುತ್ತದೆ.

17. ಉಚ್ಚ ನ್ಯಾಯಾಲಯವು ಲೋಪವೆಸಗಿದೆಯೆಂದು ಅತ್ಯಂತ ಹೆಚ್ಚು ಸ್ಪಷ್ಟವಾಗಿರುವಂಥ ಈ ಪ್ರಕರಣದ ಮೇಲ್ಕಂಡ ಗಮನಸೆಳೆಯುವ ಅಂಶವನ್ನು ಹೊರತುಪಡಿಸಿಯೂ ಪ್ರತ್ಯೇಕವಾದ ವಿದ್ಯುನ್ಮಾನ ದಾಖಲೆಯೊಂದಿಗೆ, ಪ್ರಾಸಿಕ್ಯೂಷನ್ ಇತರ ಸಾಕ್ಷ್ಯಾಧಾರಗಳ ಮೇಲೆ ಅವಲಂಬಿಸಿದೆ ಎಂದು ಅಪೀಲುದಾರರ ನಿವೇದನೆಯನ್ನು ಸಹ ನಾವು ಗಮನಿಸಬೇಕು. ಅಂಥ ಸಾಕ್ಷ್ಯಾಧಾರಗಳ ಇರುವಿಕೆಯನ್ನು ಆರೋಪ ಪಟ್ಟಿಯಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಾಸಿಕ್ಯೂಷನ್ ಅವಲಂಬಿಸಲು ಕೋರಲಾದಂಥ ದಸ್ತಾವೇಜುಗಳ ವಿವರಗಳು

ಆರೋಪಪಟ್ಟಿಯಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ 15, 25 ಮತ್ತು 28 ರಿಂದ 31 ರವರೆಗಿನ ಅಂಶಗಳಲ್ಲಿ ನಿರ್ದಿಷ್ಟ ನಮೂದನ್ನು ಹೊಂದಿವೆ. ಉಚ್ಚ ನ್ಯಾಯಾಲಯವು "ಹೊರನೋಟಕ್ಕೆ ಇದು ಮನದಟ್ಟಾಗಿಲ್ಲವೆಂದು ಕಂಡುಬಂದಿದೆ" ಎಂಬ ತೋರಿಕೆಯ ಸಮರ್ಥನೆಯ ಆಧಾರದ ಮೇಲೆ ಅಪೀಲುದಾರನ ಈ ನಿವೇದನೆಯನ್ನು ತಿರಸ್ಕರಿಸಿದೆ.

18. ಇದು ನಮ್ಮನ್ನು ಮಾನ್ಯ ಹಿರಿಯ ವಕೀಲರಾದ ಶ್ರೀ ಬಸವಪ್ರಭು ಪಾಟೀಲ್‌ರವರು ಎದುರುದಾರರ ಪರ ಮಾಡಲಾಗಿರುವ ಮಹತ್ವದ ನಿವೇದನೆಯ ಮುಂದಿನ ಭಾಗಕ್ಕೆ ದಾರಿ ತೋರಿದ್ದು, ಅದು ನಿಕಟ ಪರಿಶೀಲನೆಗೆ ಅರ್ಹವಾಗುತ್ತದೆ. ದಿನಾಂಕ: 15ನೇ ನವೆಂಬರ್ 2012 ರಂದು ತನಿಖಾಧಿಕಾರಿಯು ದೂರುದಾರನಿಗೆ ರಹಸ್ಯ ಕ್ಯಾಮೆರಾವನ್ನು ಹಸ್ತಾಂತರಿಸಿದ ಪ್ರಕ್ರಿಯೆಯು, ದಿನಾಂಕ: 16ನೇ ನವೆಂಬರ್ 2012 ರಂದು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವ ಮತ್ತು ನೋಂದಾಯಿಸುವ ಮುಂಚೆಯೇ ತನಿಖೆ ಪ್ರಾರಂಭವಾಗಿತ್ತೆಂಬುದನ್ನು ಸೂಚಿಸ್ಮತ್ತದೆಂದು ಎದುರುದಾರರ ಪರವಾಗಿ ವಾದಿಸಲಾಗಿದೆ. ಇದು **ಲಲಿತಾ ಕುಮಾರಿ** ಪ್ರಕರಣದಲ್ಲಿ ಈ ನ್ಯಾಯಾಲಯದ ಸಂವಿಧಾನ ಪೀಠದ ತೀರ್ಪಿನಿಂದ ನಿಗದಿಪಡಿಸಲಾಗಿರುವಂಥ ಮಾನದಂಡಗಳ ಉಲ್ಲಂಘನೆಯೆಂದು ನಿವೇದಿಸಲಾಗಿದೆ.

19. ಸಂವಿಧಾನ ಪೀಠದ ತೀರ್ಮಾನವನ್ನು ಪ್ರಸ್ತಾಪಿಸುವುದಕ್ಕೆ ಮುಂಚೆ **ಪಿ.ಸಿರಾಜುದ್ದೀನ್ –ವಿರುದ್ಧ– ಮದ್ರಾಸ್ ರಾಜ್ಯ** ಪ್ರಕರಣದಲ್ಲಿ ಈ ನ್ಯಾಯಾಲಯದ ಈ ಮೊದಲಿನ ತೀರ್ಮಾನದಲ್ಲಿ, ಸರ್ಕಾರಿ ನೌಕರನಿಂದಾದ ಆಪಾದಿಸಲಾದ ಭ್ರಷ್ಟಾಚಾರವನ್ನೊಳಗೊಂಡ ವಿಷಯದಲ್ಲಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವುದಕ್ಕೆ ಮುಂಚೆ ಪ್ರಾರಂಭಿಕ ವಿಚಾರಣೆ ನಡೆಸುವುದರ ಮಹತ್ವವನ್ನು ಒತ್ತಿ ಹೇಳಲಾಗಿರುತ್ತದೆಂಬುದನ್ನು ಗಮನಿಸುವ ಅಗತ್ಯತೆಯಿದೆ. ಈ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಡುತ್ತದೆ:

"17... ಒಬ್ಬ ಸರ್ಕಾರಿ ನೌಕರನನ್ನು, ಅವನ ಸ್ಥಾನಮಾನ ಏನೇ ಇದ್ದರೂ, ಈ ಪ್ರಕರಣದಲ್ಲಿ ಆಪಾದಿಸಲಾದ ರೀತಿಯ ಗಂಭೀರವಾದ ಕೆಟ್ಟನಡವಳಿಕೆ ಅಥವಾ ದುರ್ನಡತೆಗೆ ಸಮಾನವಾದ ಅಪ್ರಾಮಾಣಿಕತೆಯ ಕೃತ್ಯಗಳಿಗಾಗಿ ಸಾರ್ವಜನಿಕವಾಗಿ ಆಪಾದಿಸುವುದಕ್ಕೆ ಮುಂಚೆ ಮತ್ತು ಅವನ ವಿರುದ್ಧ ಪ್ರಥಮ ಮಾಹಿತಿಯನ್ನು ದಾಖಲಿಸುವುದಕ್ಕೆ ಮುಂಚೆ ಒಬ್ಬ ಜವಾಬ್ದಾರಿಯುತ ಅಧಿಕಾರಿಯಿಂದ ಆಪಾದನೆಗಳನ್ನು ಕುರಿತಂತೆ ಒಂದು ಸೂಕ್ತವಾದ ಪ್ರಾರಂಭಿಕ ವಿಚಾರಣೆ ಆಗಿರಲೇಬೇಕು ಒಬ್ಬ ವ್ಯಕ್ತಿಯ, ಅದರಲ್ಲೂ ನಿರ್ದಿಷ್ಟವಾಗಿ, ಈ ಅಪೀಲುದಾರನ ರೀತಿಯಲ್ಲಿ ಒಂದು ಇಲಾಖೆಯ ಉನ್ನತ ಹುದ್ದೆಯನ್ನು ಹೊಂದಿರುವ ವ್ಯಕ್ತಿಯ ವಿರುದ್ಧ ಆಧಾರ ರಹಿತವಾಗಿದ್ದರೂ, ಸಾಮಾನ್ಯವಾಗಿ ಅಂಥ ವರದಿಯನ್ನು ದಾಖಲಿಸುವುದು ನಿರ್ದಿಷ್ಟವಾಗಿ ಆ ಅಧಿಕಾರಿಗಷ್ಟೇ ಅಲ್ಲದೆ ಆತನ ಇಲಾಖೆಗೂ ಎಣಿಸಲಾರದಷ್ಟು ತೊಂದರೆಯಾಗುತ್ತದೆ. ಸರ್ಕಾರವು ಮದ್ರಾಸ್ ರಾಜ್ಯದಲ್ಲಿ ಮಾಡಿದಂತೆ ವಿಚಕ್ಷಣಾ ಮತ್ತು ಭ್ರಷ್ಟಾಚಾರ ನಿರ್ಮೂಲನ ವಿಭಾಗವನ್ನು ಸ್ಥಾಪಿಸಿದ್ದಿದ್ದರೆ ಹಾಗೂ ಸದರಿ ವಿಭಾಗಕ್ಕೆ ಈ ಬಗೆಯ ವಿಚಾರಣೆಗಳನ್ನು ವಹಿಸಿದ್ದಿದ್ದರೆ, ಈ ಇಲಾಖೆಯ ಅಧಿಕಾರಿಗಳಿಂದ ವಿಚಾರಣೆಗೆ ಯಾವುದೇ ಆಕ್ಷೇಪವಿರುತ್ತಿರಲಿಲ್ಲ, ಆದರೆ ಅಂಥ ಯಾವುದೇ ವಿಚಾರಣೆಯು ನಿಷ್ಪಕ್ಷಪಾತ ಮತ್ತು ಯುಕ್ತರೀತಿಯಲ್ಲಿ ನಡೆಯಬೇಕು. ವಿಚಾರಣಾಧೀಕಾರಿಯು ವಿಚಾರಣೆ ನಡೆಸುತ್ತಿರುವ ವ್ಯಕ್ತಿಯ ನಡವಳಿಕೆಯ ತಪ್ಪಿನ ಬಗ್ಗೆ ಯಾವುದೇ ಪೂರ್ವಾಲೋಚಿತ ವಿಚಾರದಂತೆ ಕಾರ್ಯಕೈಗೊಳ್ಳಬಾರದು ಅಥವಾ ಸಂಶಯದಿಂದ ಕೂಡಿದ ಸಿಂಧುತ್ವ ಅಥವಾ ಮಂಜೂರಾತಿಯಂಥ ಕ್ರಮಗಳನ್ನು ಅಂಗೀಕರಿಸುವ ಮೂಲಕ ಸದರಿ ವ್ಯಕ್ತಿಯ ಬಗ್ಗೆ ಮನವರಿಕೆ ಮಾಡಿಕೊಡಲು ಪಟ್ಟುಹಿಡಿದಿದ್ದಾನೆಂಬ ಊಹೆಯುಂಟಾಗುವಂಥ ರೀತಿಯಲ್ಲಿ ವಿಚಾರಣೆಯನ್ನು ಅನುಸರಣೆ ಮಾಡಬಾರದು. ಸಾಧಿಸಬೇಕಾದ ಉದ್ದೇಶಕ್ಕಿಂತ ಕಡಿಮೆಯಲ್ಲದಂತೆ ಅಂಗೀಕರಿಸಲಾದ ಮಾಧ್ಯಮವು ದೋಷರಹಿತವಾಗಿರಬೇಕು. ಕರ್ತವ್ಯಚ್ಯುತಿಯೆಂದು ಆರೋಪಿಸಿ ಸರ್ಕಾರಿ ನೌಕರನ ವಿರುದ್ಧದ ಸಾಧಾರಣ ಇಲಾಖಾ ವ್ಯವಹರಣೆಗಳಲ್ಲಿ, ಪ್ರಾಧಿಕಾರದ ಯಾರಾದರೊಬ್ಬರು ಆ ವಿಷಯದಲ್ಲಿ ಭಾಗಿಯಾದ ವ್ಯಕ್ತಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳುವುದು ಮತ್ತು ಒಳಗೊಂಡಿರುವ ವಿಷಯದ ಬಗ್ಗೆ ಸಂಬಂಧಪಟ್ಟಿರುವ ದಸ್ತಾವೇಜುಗಳನ್ನು

ಪರಿಶೀಲಿಸುವುದು ಆರೋಪಪಟ್ಟಿಯನ್ನು ನೀಡುವ ಮುಂಚಿನ ಸಾಮಾನ್ಯ ರೂಢಿಯಾಗಿದೆ. ಆ ನಂತರ ಮಾತ್ರವೇ ಆರೋಪಪಟ್ಟಿಯನ್ನು ಸಲ್ಲಿಸಲಾಗಿದೆ ಮತ್ತು ಪೂರ್ಣಪ್ರಮಾಣದ ವಿಚಾರಣೆಯನ್ನು ಆರಂಭಿಸಲಾಗಿದೆ. ಕ್ರಿಮಿನಲ್ ವ್ಯವಹರಣೆಗಳು ಅದರ ವ್ಯಾಪ್ತಿಯನ್ನವಲಂಬಿಸಬೇಕೆ ಎಂಬುದನ್ನು ಕಂಡುಹಿಡಿಯುವ ಉದ್ದೇಶಕ್ಕಾಗಿ ವಿಚಾರಣೆ ನಡೆಸುವಾಗ, ಕರ್ತವ್ಯಚ್ಯುತ ಅಧಿಕಾರಿಯ ವ್ಯವಹಾರಗಳು ಗೊತ್ತಿರುವ ವ್ಯಕ್ತಿಗಳ ವಿಚಾರಣೆಗೆ ಮತ್ತು ಅಧಿಕಾರಿಯ ತಪ್ಪು ಮೊದಲ ನೋಟದ ಸಾಕ್ಷ್ಯವಾಗಿದೆಯೇ? ಎಂಬುದನ್ನು ಕಂಡುಹಿಡಿಯಲು ಅದಕ್ಕೆ ಸಂಬಂಧಿಸಿದ ದಾಖಲೆಗಳಿಗೆ ಸೀಮಿತವಾಗಬೇಕೆ? ಆ ನಂತರ ದೇಶದ ಕಾನೂನು ತನ್ನ ಸಹಜ ಕ್ರಮವನ್ನು ಕೈಗೊಳ್ಳಬೇಕಿದೆ ಹಾಗೂ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವ ಮೂಲಕ ದಂಡ ಪ್ರಕ್ರಿಯಾ ಸಂಹಿತೆಗೆ ಸಂಬಂಧಿಸಿದಂತೆ ಹೆಚ್ಚಿನ ವಿಚಾರಣೆಯನ್ನು ನಡೆಸಲು ಮುಂದಾಗಬೇಕಿದೆ."

20. ಸರ್ಕಾರಿ ನೌಕರನು ಗಂಭೀರವಾದ ಕೆಟ್ಟನಡವಳಿಕೆಯಿಂದ ಕೂಡಿದ ಅಪ್ರಾಮಾಣಿಕ ಕೃತ್ಯವನ್ನು ಎಸಗಿರುವುದಾಗಿ ಆಪಾದಿಸಿರುವಲ್ಲಿ ಪ್ರಾರಂಭಿಕ ವಿಚಾರಣೆಯ ಅಗತ್ಯತೆಯನ್ನು **ಪಿ. ಸಿರಾಜುದ್ದೀನ್ (ಮೇಲೆ ಹೇಳಿದ)** ಒತ್ತಿಹೇಳಿದ್ದಾರೆ. ಪ್ರಾರಂಭಿಕ ವಿಚಾರಣೆಯ ಉದ್ದೇಶವು, ಸಂಜ್ಞೇಯ ಅಪರಾಧವನ್ನು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಬಹುದಿತ್ತು ಎಂಬ ಆಧಾರದ ಮೇಲೆ ಮಾಡಲಾಗಿದೆಯೇ? ಎಂಬುದನ್ನು ನಿಶ್ಚಿತಪಡಿಸಿಕೊಳ್ಳುವುದಾಗಿದೆ. ದಂಡ ಪ್ರಕ್ರಿಯಾ ಸಂಹಿತೆಯ 154ನೇ ಪ್ರಕರಣದಡಿ ಪ್ರಥಮ ಮಾಹಿತಿ ವರದಿಯ ಆಧಾರವು, ಪೊಲೀಸ್ ಠಾಣೆಯ ಆಡಳಿತವನ್ನು ಹೊಂದಿರುವ ಅಧಿಕಾರಿಗೆ ಒದಗಿಸಲಾದ, ಸಂಜ್ಞೇಯ ಅಪರಾಧವನ್ನು ಎಸಗಿರುವುದಕ್ಕೆ ಸಂಬಂಧಿಸಿದ ಮಾಹಿತಿಯಾಗಿದೆ. **ಪಿ. ಸಿರಾಜುದ್ದೀನ್** ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪಿನಲ್ಲಿ ಪ್ರಾರಂಭಿಕ ವಿಚಾರಣೆಯನ್ನು ನಿರ್ದೇಶಿಸಲಾಗಿರುತ್ತದೆಂದು ಸರ್ಕಾರಿ ನೌಕರನಿಂದ ಭ್ರಷ್ಟಾಚಾರ ಕೃತ್ಯವನ್ನು ಆಪಾದಿಸಿರುವುದನ್ನು ಒಳಗೊಂಡ ಪ್ರಕರಣದಲ್ಲಿ ಸಂಜ್ಞೇಯ ಅಪರಾಧವು ಸೂಚಿತವಾಗಿರುವುದಾಗಿ ಕಂಡುಬಂದಿರುತ್ತದೆಯೇ? ಎಂಬುದನ್ನು ಖಚಿತಪಡಿಸಿಕೊಳ್ಳುವ

ದೃಷ್ಟಿಯಿಂದ ಕೂಡಿದೆ. **ಪಿ. ಸಿರಾಜುದ್ದೀನ್** ಪ್ರಕರಣದಲ್ಲಿನ ತೀರ್ಪನ್ನು **ಲಲಿತಾ ಕುಮಾರಿ** ಪ್ರಕರಣದಲ್ಲಿ ಸಂವಿಧಾನ ಪೀಠವು ಅಂಗೀಕರಿಸಿತು ಹಾಗೂ ಅನುಸರಿಸಿತು. ಸಂವಿಧಾನ ಪೀಠವು, ಸಂಜ್ಞೇಯ ಅಪರಾಧವನ್ನು ಎಸಗಿರುವುದನ್ನು ತೋರಿಸುವ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ಪ್ರಥಮ ಮಾಹಿತಿ ವರದಿಯ ಕಡ್ಡಾಯ ನೋಂದಣಿಯನ್ನು ದಂಡ ಪ್ರಕ್ರಿಯಾ ಸಂಹಿತೆಯ 154ನೇ ಪ್ರಕರಣವು ವಿಧಿಸುವಾಗ, ಆಗಲೂ ಪ್ರಾರಂಭಿಕ ವಿಚಾರಣೆಯ ಅಗತ್ಯತೆ ಇರಬಹುದಾದಂಥ ಸನ್ನಿವೇಶಗಳಿರಬಹುದಾಗಿದೆಯೆಂದು ಅಭಿಪ್ರಾಯಪಟ್ಟಿದೆ. ಪ್ರಾರಂಭಿಕ ವಿಚಾರಣೆಗಳು ಸಮರ್ಥಿತವಾಗಿರುವ ಪ್ರಕರಣಗಳನ್ನು ಸೂಚಿಸುತ್ತಾ, ಈ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "120.5. ಪ್ರಾರಂಭಿಕ ವಿಚಾರಣೆಯ ವ್ಯಾಪ್ತಿಯು, ಸ್ವೀಕರಿಸಿದ ಮಾಹಿತಿಯ ನಿಖರತೆಯನ್ನು ಅಥವಾ ಅದರ ಸಾಧಕ ಬಾಧಕಗಳನ್ನು ಪರೀಕ್ಷಿಸುವುದಲ್ಲ. ಆದರೆ, ಮಾಹಿತಿಯು ಯಾವುದೇ ಸಂಜ್ಞೇಯ ಅಪರಾಧವನ್ನು ಬಹಿರಂಗಪಡಿಸುತ್ತದೆಯೆ? ಎಂಬುದನ್ನು ಖಚಿತಪಡಿಸುವುದಕ್ಕಾಗಿ ಮಾತ್ರ ಇದೆ.
>
> 120.6. ಯಾವ ಬಗೆಯಲ್ಲಿ ಮತ್ತು ಯಾವ ಪ್ರಕರಣಗಳಲ್ಲಿ ಪ್ರಾರಂಭಿಕ ವಿಚಾರಣೆ ನಡೆಸಬೇಕೆಂಬುದು ಪ್ರತಿಯೊಂದು ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಅವಲಂಬಿಸುತ್ತದೆ. ಪ್ರಾರಂಭಿಕ ವಿಚಾರಣೆಯನ್ನು ಮಾಡಬಹುದಾದ ಪ್ರಕರಣಗಳ ವರ್ಗಗಳು ಈ ಕೆಳಗಿನಂತಿವೆ:
>
> ಎ) ವೈವಾಹಿಕ ವಿವಾದಗಳು / ಕೌಟುಂಬಿಕ ವಿವಾದಗಳು
>
> ಬಿ) ವಾಣಿಜ್ಯ ಅಪರಾಧಗಳು
>
> ಸಿ) ವೈದ್ಯಕೀಯ ನಿರ್ಲಕ್ಷ್ಯ ಪ್ರಕರಣಗಳು
>
> ಡಿ) ಭ್ರಷ್ಟಾಚಾರ ಪ್ರಕರಣಗಳು

ಇ) ಕ್ರಿಮಿನಲ್ ಪ್ರಾಸಿಕ್ಯೂಷನ್ನನ್ನು ಪ್ರಾರಂಭಿಸುವಲ್ಲಿ ಅಸಹಜ ವಿಳಂಬ/ಕರ್ತವ್ಯ ಲೋಪ ಇರುವ ಪ್ರಕರಣಗಳು ಉದಾಹರಣೆಗೆ, ವಿಳಂಬಕ್ಕೆ ಕಾರಣಗಳನ್ನು ಮನದಟ್ಟಾಗುವಂತೆ ವಿವರಿಸದೆ, ವಿಷಯವನ್ನು ವರದಿ ಮಾಡುವಲ್ಲಿ 3 ತಿಂಗಳುಗಳ ವಿಳಂಬ.

ಪ್ರಾರಂಭಿಕ ವಿಚಾರಣೆಯನ್ನು ನಡೆಸುವ ಉದ್ದೇಶವನ್ನು ಈ ಮುಂದಿನ ಉದ್ಧೃತಭಾಗದಲ್ಲಿ ವಿಸ್ತೃತಗೊಳಿಸಲಾಗಿದೆ:

> "ಆದುದರಿಂದ, ನೋಂದಣಿ ಸಹಿತ ಅಥವಾ ನೋಂದಣಿ ರಹಿತ ಎಂಬುದಕ್ಕೆ ಸಂಬಂಧಿಸಿದಂತೆ ಅನೇಕ ಎದುರು ಕ್ಲೇಮುಗಳ ದೃಷ್ಟಿಯಿಂದ, ಅಗತ್ಯವಿರುವುದೇನೆಂದರೆ, ಪೊಲೀಸರಿಗೆ ನೀಡಿದ ಮಾಹಿತಿಯು ಸಂಜ್ಞೇಯ ಅಪರಾಧ ಎಸಗಿರುವುದನ್ನು ಬಹಿರಂಗಪಡಿಸಬೇಕು ಎಂಬುದಷ್ಟೇ ಆಗಿದೆ. ಇಂಥ ಸನ್ನಿವೇಶದಲ್ಲಿ, ಪ್ರಥಮ ಮಾಹಿತಿ ವರದಿಯ ನೋಂದಣಿ ಕಡ್ಡಾಯವಾಗಿದೆ. ಹಾಗಿದ್ದರೂ, ನೀಡಲಾದ ಮಾಹಿತಿಯಲ್ಲಿ ಯಾವುದೇ ಸಂಜ್ಞೇಯ ಅಪರಾಧ ಮಾಡಿರದಿದ್ದಲ್ಲಿ, ಆಗ ಕೂಡಲೇ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವ ಅಗತ್ಯವಿಲ್ಲ ಮತ್ತು ಸಂಜ್ಞೇಯ ಅಪರಾಧವನ್ನು ಎಸಗಲಾಗಿದೆಯೇ? ಎಂಬುದಕ್ಕೆ ಸಂಬಂಧಿಸಿ, ಬಹುಶಃ ಪೊಲೀಸರು ಒಂದು ರೀತಿಯ ಪ್ರಾರಂಭಿಕ ಪರಿಶೀಲನೆಯನ್ನು ನಡೆಸಬಹುದು. ಆದರೆ, ನೀಡಲಾದ ಮಾಹಿತಿಯು ಸಂಜ್ಞೇಯ ಅಪರಾಧವೆಸಗಿರುವುದನ್ನು ಸ್ಪಷ್ಟವಾಗಿ ಹೇಳಿದ್ದಲ್ಲಿ ಕೂಡಲೇ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವುದನ್ನು ಬಿಟ್ಟು ಬೇರೆ ಆಯ್ಕೆಯಿಲ್ಲ. ಸುಳ್ಳು ಮಾಹಿತಿಯನ್ನು ನೀಡಲಾಗಿದೆಯೇ? ಮಾಹಿತಿಯು ಪ್ರಾಮಾಣಿಕವಾದುದೇ? ಮಾಹಿತಿಯು ವಿಶ್ವಾಸಾರ್ಹವಾದುದೇ? ಇತ್ಯಾದಿಯಂತಹ ಇತರ ಪರಿಗಣನೆಗಳು ಪ್ರಥಮ ಮಾಹಿತಿ ವರದಿಯನ್ನು ದಾಖಲು ಮಾಡುವ ಹಂತದಲ್ಲಿ ಸುಸಂಗತವಲ್ಲ. ಇವು ಪ್ರಥಮ ಮಾಹಿತಿ ವರದಿಯ ತನಿಖೆಯ ಅವಧಿಯಲ್ಲಿ ಪರಿಶೀಲಿಸಬೇಕಾದ ಪ್ರಶ್ನೆಗಳಾಗಿವೆ. ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವ ಹಂತದಲ್ಲಿ, ಮಾಹಿತಿಯು ಮೇಲ್ನೋಟಕ್ಕೆ ಸಂಜ್ಞೇಯ ಅಪರಾಧ ಎಸಗಿರುವುದನ್ನು ಬಹಿರಂಗ ಪಡಿಸುತ್ತದೆಯೇ? ಎಂಬುದಷ್ಟನ್ನೇ ಪರಿಶೀಲಿಸಬೇಕು. ನೀಡಲಾದ ಮಾಹಿತಿಯು

ತನಿಖೆಯ ನಂತರ ಸುಳ್ಳೆಂದು ಕಂಡುಬಂದಲ್ಲಿ, ಸುಳ್ಳು ಎಫ್ಐಆರ್ ದಾಖಲಿಸಿದ್ದಕ್ಕಾಗಿ ದೂರುದಾರನ ಮೇಲೆ ಕ್ರಮ ಜರುಗಿಸುವ ಆಯ್ಕೆ ಇದ್ದೇ ಇರುತ್ತದೆ."

21. ಸದ್ಯದ ಪ್ರಕರಣದಲ್ಲಿ, ದಿನಾಂಕ: 15ನೇ ನವೆಂಬರ್ 2016 ರಂದು ದೂರುದಾರನು ಎದುರುದಾರನನ್ನು ಭೇಟಿಯಾಗಿರುವುದಾಗಿ ಆಪಾದಿಸಲಾಗಿದೆ. ಆ ಭೇಟಿಯ ಅವಧಿಯಲ್ಲಿ, ಸಂಭಾಷಣೆಯನ್ನು ರಹಸ್ಯ ಕ್ಯಾಮೆರಾದಲ್ಲಿ ದಾಖಲು ಮಾಡಲಾಗಿದೆ. ಅದಕ್ಕೆ ಮುಂಚೆ, ತನಿಖಾಧಿಕಾರಿಯು ರಹಸ್ಯ ಕ್ಯಾಮೆರಾವನ್ನು ದೂರುದಾರನಿಗೆ ಹಸ್ತಾಂತರಿಸಿದ್ದಾನೆ. ಈ ಹಂತವು ತನಿಖೆಯ ಪ್ರಾರಂಭವನ್ನು ಪ್ರತಿನಿಧಿಸುವುದಿಲ್ಲ. ಆ ಹಂತದಲ್ಲಿ, ದೂರುದಾರನು ಒದಗಿಸಿದ ಮಾಹಿತಿಯು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವ ಆಧಾರವನ್ನು ರೂಪಿಸುತ್ತದೆಯೇ? ಎಂಬುದನ್ನು ಪ್ರಾರಂಭಿಕ ವಿಚಾರಣೆಯ ಅವಧಿಯಲ್ಲಿ ಖಚಿತಪಡಿಸಿಕೊಳ್ಳುವ ಉದ್ದೇಶದ್ದಾಗಿರುತ್ತದೆ. ಅದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ದಿನಾಂಕ: 15ನೇ ನವೆಂಬರ್ 2012 ರಂದು ನಡೆಸಲಾದ ಪ್ರಕ್ರಿಯೆಯ ಉದ್ದೇಶವೆಂದರೆ, ಮಾಹಿತಿಯು ಸಂಜ್ಞೇಯ ಅಪರಾಧವನ್ನು ಬಹಿರಂಗಪಡಿಸುತ್ತದೆಯೇ? ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರಾರಂಭಿಕ ವಿಚಾರಣೆ ನಡೆಸುವುದಾಗಿತ್ತು.

22. ಸದ್ಯದ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯವು ಮೇಲ್ಕಂಡ ಎಲ್ಲಾ ಕಾರಣಗಳಿಗಾಗಿ ತಪ್ಪೆಸಗಿದೆ. 65ಬಿ ಪ್ರಕರಣದಡಿ ಪ್ರಮಾಣಪತ್ರ ಇಲ್ಲದಿದ್ದರೆ, ಪ್ರಾಸಿಕ್ಯೂಷನ್ ವಿಫಲವಾಗಲು ಹೊಣೆಯಾಗಿತ್ತೆಂದು ಮತ್ತು ಆ ಹಂತದಲ್ಲಿ ವ್ಯವಹರಣೆಯನ್ನು ರದ್ದುಪಡಿಸಬೇಕೆಂದು ಅಗತ್ಯಪಡಿಸಲಾಯಿತೆಂದು ನಿರ್ಣಯಕ್ಕೆ ಬರುವಲ್ಲಿ ಉಚ್ಚ ನ್ಯಾಯಾಲಯವು ತಪ್ಪೆಸಗಿದೆ. ಉಚ್ಚ ನ್ಯಾಯಾಲಯವು ಪ್ರಾಸಿಕ್ಯೂಷನ್ ಅವಲಂಬಿಸಲು ಕೋರಿದ್ದಂಥ ಇತರ ಸಾಕ್ಷ್ಯಾಧಾರಗಳ ಬಗ್ಗೆ ಸ್ಪಷ್ಟವಾಗಿ ಕುರುಡಾಗಿದೆ. ಅಂತಿಮವಾಗಿ, ಪ್ರಥಮ ಮಾಹಿತಿ ವರದಿಯನ್ನು ದಾಖಲು ಮಾಡುವ ಮುಂಚೆ ಅಂತಹ ಯಾವುದೇ ತನಿಖೆ ಪ್ರಾರಂಭವಾಗಿಲ್ಲ. ತನಿಖಾಧಿಕಾರಿಯು

ಪ್ರಾರಂಭಿಕ ವಿಚಾರಣೆಯನ್ನು ಕೈಗೊಂಡಿದ್ದರು. ಇದು **ಲಲಿತಾ ಕುಮಾರಿ** ಪ್ರಕರಣದಲ್ಲಿನ ತೀರ್ಮಾನಕ್ಕೆ ಸಮರ್ಪಕವಾಗಿತ್ತು.

23. ದಂಡ ಪ್ರಕ್ರಿಯಾ ಸಂಹಿತೆಯ 239ನೇ ಪ್ರಕರಣದ ಉಪಬಂಧಗಳಡಿ ಬಿಡುಗಡೆಗಾಗಿನ ಅರ್ಜಿಯೊಂದಿಗೆ ಅಧಿವಿಚಾರಣಾ ನ್ಯಾಯಾಲಯವು ವ್ಯವಹರಿಸುತ್ತದೆಯೆಂಬ ಸಂಗತಿಯ ಬಗ್ಗೆ ಉಚ್ಚ ನ್ಯಾಯಾಲಯವು ಸಂಜ್ಞೇಯವಾಗಿರಲೇಬೇಕು. ಈ ಅಧಿಕಾರ ಚಲಾವಣೆಯನ್ನು ರೂಪಿಸುವ ಮಾನದಂಡಗಳು ಈ ನ್ಯಾಯಾಲಯದ ಹಲವಾರು ನಿರ್ಣಯಗಳಲ್ಲಿ ವ್ಯಕ್ತಗೊಂಡಿವೆ. ಇದು ಬಿಡುಗಡೆಗಾಗಿ ಅರ್ಜಿಯನ್ನು ಪರಿಗಣಿಸುವ ಹಂತದಲ್ಲಿ ಪ್ರಾಸಿಕ್ಯೂಷನ್‌ನಿಂದ ದಾಖಲಿಸಲಾದಂಥ ಸಾಕ್ಷ್ಯಾಧಾರವನ್ನು ಸತ್ಯವೆಂಬ ಭಾವನೆಯಲ್ಲಿ ನ್ಯಾಯಾಲಯವು ಮುಂದುವರೆಯಬೇಕು ಮತ್ತು ಆ ಸಾಕ್ಷ್ಯಾಧಾರದಿಂದ ಹೊರಬರುವ ಸಂಗತಿಗಳನ್ನು ಮೇಲ್ನೋಟಕ್ಕೆ ಕಾಣುವಂತೆ ತೆಗೆದುಕೊಂಡಿದ್ದು, ಅಪರಾಧ ಘಟಿಸಲು ಬೇಕಾದ ಘಟಕಾಂಶಗಳ ಅಸ್ತಿತ್ವವನ್ನು ಬಹಿರಂಗಪಡಿಸುತ್ತದೆಯೇ? ಎಂಬುದನ್ನು ನಿರ್ಧರಿಸುವ ಸಲುವಾಗಿ ಸಾಕ್ಷ್ಯಾಧಾರವನ್ನು ಮೌಲ್ಯನಿರ್ಧಾರ ಮಾಡುತ್ತದೆ ಎಂಬುದು ಕಾನೂನಿನ ನಿಶ್ಚಿತ ನಿಯಮವಾಗಿದೆ. **ತಮಿಳುನಾಡು ರಾಜ್ಯ –ವಿರುದ್ಧ– ಎನ್ ಸುರೇಶ್ ರಾಜನ್** ಪ್ರಕರಣದಲ್ಲಿ ಆ ವಿಷಯದ ಬಗ್ಗೆ ಹಿಂದಿನ ತೀರ್ಮಾನಗಳನ್ನು ಪ್ರಸ್ತಾಪಿಸುತ್ತಾ:

> "29... ಈ ಹಂತದಲ್ಲಿ ಸಾಕ್ಷ್ಯಾಧಾರಗಳ ಪ್ರಮಾಣೀಕರಣ/ಮೌಲ್ಯವನ್ನು ಪರಿಶೀಲಿಸಬೇಕು ಮತ್ತು ನ್ಯಾಯಾಲಯವು ವಿಷಯವನ್ನು ತೀರಾ ವಿವರವಾಗಿ ಪರಿಶೀಲಿಸುವಂತಿಲ್ಲ ಹಾಗೂ ಸಾಕ್ಷ್ಯಾಧಾರಗಳು ಅಪರಾಧ ನಿರ್ಣಯವನ್ನು ಸಮರ್ಥಿಸುವುದಿಲ್ಲವೆಂದು ತೀರ್ಮಾನಕ್ಕೆ ಬರುವಂತಿಲ್ಲ ಎಂದು ನಿರೀಕ್ಷಿಸಲಾಗಿದೆ. ನಮ್ಮ ಅಭಿಪ್ರಾಯದಲ್ಲಿ, ಪರಿಗಣಿಸಬೇಕಾದುದೇನೆಂದರೆ, ಅಪರಾಧವನ್ನು ಎಸಗಲಾಗಿದೆಯೆಂಬ ಪೂರ್ವಭಾವನೆಗೆ ಆಧಾರವಿದೆಯೇ? ಎಂಬುದಾಗಿದೆಯೇ ಹೊರತು ಆಪಾದಿತನನ್ನು ಅಪರಾಧಿಯೆಂದು ನಿರ್ಣಯಿಸಲು ಆಧಾರವನ್ನು ಮಾಡಲಾಗಿದೆಯೇ? ಎಂಬುದಲ್ಲ.

> ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಆಪಾದಿತನು ಸಾಕ್ಷ್ಯಾಧಾರಗಳ ಆಧಾರದ ಮೇಲೆ ಅದರ ಪ್ರಮಾಣೀಕರಣ ಮೌಲ್ಯದ ಮೇಲೆ, ಕಡತದಲ್ಲಿನ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಅಪರಾಧವೆಸಗಿರಬಹುದೆಂದು ನ್ಯಾಯಾಲಯವು ಭಾವಿಸಿದಲ್ಲಿ, ಅದು ಆರೋಪವನ್ನು ರೂಪಿಸಬಹುದು; ಆದರೂ, ಅಪರಾಧ ನಿರ್ಣಯಕ್ಕಾಗಿ ನ್ಯಾಯಾಲಯವು, ಆಪಾದಿತನು ಅಪರಾಧ ಮಾಡಿದ್ದಾನೆಂದು ನಿರ್ಣಯಕ್ಕೆ ಬಂದಿದೆ. ಈ ಹಂತದಲ್ಲಿ ಚಿಕ್ಕ ಅಧಿವಿಚಾರಣೆಗೆ ಕಾನೂನು ಅನುಮತಿಸುವುದಿಲ್ಲ."

24. ಈ ಮೇಲಿನ ಕಾರಣಗಳಿಗಾಗಿ, ಈ ಅಪೀಲನ್ನು ಅಂಗೀಕರಿಸಬೇಕಾಗುತ್ತದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ. ತದನುಸಾರವಾಗಿ ನಾವು ಈ ಅಪೀಲನ್ನು ಅಂಗೀಕರಿಸುತ್ತೇವೆ ಮತ್ತು ಕ್ರಿಮಿನಲ್ ರಿಟ್ ಅರ್ಜಿ ಸಂ.3205/2017 ರಲ್ಲಿ ದಿನಾಂಕ: 24ನೇ ಏಪ್ರಿಲ್ 2017ರ ಉಚ್ಚ ನ್ಯಾಯಾಲಯದ ತೀರ್ಪು ಮತ್ತು ಆದೇಶವನ್ನು ರದ್ದುಪಡಿಸುತ್ತೇವೆ. ತದನುಸಾರವಾಗಿ ನಾವು, ಎದುರುದಾರರು ಸಲ್ಲಿಸಿದ ಬಿಡುಗಡೆ ಅರ್ಜಿಯನ್ನು ವಜಾಗೊಳಿಸಿ ದಿನಾಂಕ: 5ನೇ ಡಿಸೆಂಬರ್ 2016 ರಂದು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು ಸಮರ್ಥಿಸುತ್ತೇವೆ.

......................................

(ಡಾ॥ ಧನಂಜಯ ವೈ ಚಂದ್ರಚೂಡ್)

......................................

(ಹೇಮಂತ್ ಗುಪ್ತ)

ನವದೆಹಲಿ,
1ನೇ ಮೇ, 2019

**ಕ್ಲೇಮು ನಿರಾಕರಣೆ**

"ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ" ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು."